<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿ.ಸಿ. ನಂ.274/2018**

| | | | |
|---|---|---|---|
| **ಹೆಸರು** | **:** | **ಗುಂಡಪ್ಪ** | **ದೋ.ಸಾ. 7** |
| **ತಂದೆಯ ಹೆಸರು** | **:** | **ಹಣುಮಂತ** | **ಪ್ರಾ.ಸಾ. 5** |
| **ವಯಸ್ಸು** | **:** | **59 ವರ್ಷ** | **ದಿನಾಂಕಃ 25-09-2023** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಪೋಲಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-8 ನನಗೆ ಗೊತ್ತಿಲ್ಲ.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ  ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗ ನಿಪಿ-11 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಈಗ್ಗೆ 7-8 ವರ್ಷಗಳ ಹಿಂದೆ  ಒಂದು ದಿನ ಸಂಜೆ 06-00 ಗಂಟೆಗೆ ನಾನು ಚಿಂಚೋಳಿ ಪೊಲೀಸ್ ಠಾಣೆ ಮುಂಭಾಗದಲ್ಲಿರುವ ಪೆಟ್ರೋಲ್ ಪಂಪ್ ಬಳಿ ಹೋಗಿದ್ದೆ, ಆಗ ಅಲ್ಲಿಗೆ ಬಂದ ಪೊಲೀಸರು ನನ್ನನ್ನು ಠಾಣೆಗೆ ಬರುವಂತೆ ಹೇಳಿದ ಮೇರೆಗೆ ನಾನು ಠಾಣೆಗೆ ಹೋದೆ.  ಸದರಿ ಠಾಣೆಯಲ್ಲಿ ಪೊಲೀಸರು ನಿಪಿ-11 ರ ದಾಖಲೆ ಮೇಲೆ ನನ್ನ ಸಹಿ ಪಡೆದರು.

ನಿಪಿ-11 ರ ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ಪೋಲೀಸರು ನನ್ನ ಸಮಕ್ಷಮ ಬೇರೆ ಯಾವುದೇ ವ್ಯಕ್ತಿಯ ಸಹಿ ಪಡೆದಿಲ್ಲ. ನಿಪಿ-11 ರ ದಾಖಲೆಗೆ ನನ್ನ ಸಹಿ ಪಡೆಯುವ ಕಾಲಕ್ಕೆ ಪೊಲೀಸರು ನನಗೆ ಯಾರನ್ನು ತೋರಿಸಿಲ್ಲ.  ಯಾವ ಉದ್ದೇಶಕ್ಕೆ ನನ್ನ ಸಹಿ ಪಡೆಯಲಾಯಿತು ಎಂದು ನನಗೆ ಗೊತ್ತಿಲ್ಲ.  ಸದರಿ ವಿಷಯವನ್ನು ನನಗೆ ಪೊಲೀಸರು ಹೇಳಿಲ್ಲ.

ಈಗ ನನಗೆ ತೋರಿಸಲಾದ 7 ದಾಖಲೆಯಲ್ಲಿರುವ ಸಹಿಗಳು ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಗಳನ್ನು ಈಗ ನಿಪಿ-12 ರಿಂದ 18 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

12(ಎ), 13(ಎ), 14(ಎ), 15(ಎ), 16(ಎ),17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು.

ನಿಪಿ-11 ರ ದಾಖಲೆಗೆ ನನ್ನ ಸಹಿ ಪಡೆಯುವ ಕಾಲಕ್ಕೆ ಪೊಲೀಸರು ನಿಪಿ-12 ರಿಂದ 18 ರ ದಾಖಲೆಗಳಿಗೂ ನನ್ನ ಸಹಿ ಪಡೆದಿರುತ್ತಾರೆ. ನಿಪಿ-12 ರಿಂದ 18 ರ ದಾಖಲೆಗಳ ಮೇಲೆ ನನ್ನ ಸಹಿಯನ್ನು ಯಾವ ಉದ್ದೇಶಕ್ಕೆ ಪಡೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸದರಿ ಉದ್ದೇಶವನ್ನು ನನಗೆ ತಿಳಿಸಿಲ್ಲ. ನಿಪಿ-12 ರಿಂದ 18 ರ ದಾಖಲೆಗಳಿಗೆ ನನ್ನ ಸಹಿ ಪಡೆಯುವ ಸಂದರ್ಭದಲ್ಲಿ ಬೇರೆ ಯಾರು ಇರಲಿಲ್ಲ. ಸದರಿ ದಾಖಲೆಗಳಲ್ಲಿ ನನ್ನ ಇರುವ ಮೇಲ್ಮಾಭಾಗದಲ್ಲಿ ಇರುವ 9 ಮಾದರಿ ಬರವಣಿಗೆ ಮತ್ತು ಸಹಿಗಳು ಯಾರದ್ದು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರು ಆರೋಪಿಯ ಮಾದರಿ ಬರವಣಿಗೆ ಮತ್ತು ಸಹಿ ಪಡೆದುಕೊಳ್ಳುವ ಕಾಲಕ್ಕೆ ಜರುಗಿಸಿದ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

ದಿನಾಂಕ 04-07-2015 ರಂದು ಸಂಜೆ 06-30 ಕ್ಕೆ ಪೊಲೀಸರು ನನ್ನನ್ನು ಚಿಂಚೋಳಿ ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಸದರಿ ದಿನ ಪೊಲೀಸರು ಈ ಪ್ರರಕಣದ ಆರೋಪಿ ಶಿವಶರಣಪ್ಪನನ್ನು ನನಗೆ ಮತ್ತು ಮತ್ತೊಬ್ಬ ಸಾಕ್ಷಿದಾರ ಚಾಸಾ-8 ರವರಿಗೆ ತೋರಿಸಿ ಸದರಿ ಆರೋಪಿಯು ವಂಚನೆ ಮತ್ತು ದಾಖಲೆ ತಿದ್ದುಪಡಿ ಪ್ರಕರಣದಲ್ಲಿ ಭಾಗಿಯಾಗಿದ್ದು ತನಿಖೆಯ ಸಲುವಾಗಿ ಆತನ ಮಾದರಿ ಬರವಣಿಗೆ ಮತ್ತು ಸಹಿಗಳನ್ನು ಪಡೆಯುವುದಿದೆ ಅದಕ್ಕಾಗಿ ಪಂಚರಾಗಿ ಸಹಕರಿಸಬೇಕಾಗಿ ನಮ್ಮನ್ನು ಕೋರಿದರು ಮತ್ತು ನಾವು ಒಪ್ಪಿಕೊಂಡೆವು ಎನ್ನುವುದು ಸರಿಯಲ್ಲ. ಅದರಂತೆ ಪೊಲೀಸರು ನನ್ನ ಮತ್ತು ಚಾಸಾ-8 ರವರ ಸಮಕ್ಷಮ ನಿಪಿ-12 ರಿಂದ 18 ರ ದಾಖಲೆಗಳ ಮೇಲೆ ಆರೋಪಿಯ ಮಾದರಿ ಬರವಣಿಗೆ ಮತ್ತು ಸಹಿಗಳನ್ನು ಪಡೆದು ಸದರಿ ದಾಖಲೆಗಳಿಗೆ ನಮ್ಮ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ-12 ರಿಂದ 18 ರ ದಾಖಲೆಗಳಿಗೆ ಆರೋಪಿ ಮತ್ತು ನಮ್ಮ ಸಹಿ ಪಡೆದುಕೊಂಡು ಸಂಜೆ 06-30 ರಿಂದ 07-30 ವರೆಗೆ ಪೊಲೀಸರು ನಿಪಿ-11 ರ ಪಂಚನಾಮೆಯನ್ನು ಬರೆದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಸಂಜೆ 06-00 ಗಂಟೆಗೆ ಪೊಲೀಸರು ಠಾಣೆಗೆ ಕರೆಯಿಸಿ ನಿಪಿ-11 ರಿಂದ 18 ರ ದಾಖಲೆ ಮೇಲೆ ನನ್ನ ಸಹಿ ಪಡೆದಿದ್ದಾರೆ, ಆಗ ಬೇರೆ ಯಾರೂ ಇರಲಿಲ್ಲ ಮತ್ತು ಇತರೆ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನಿಪಿ-11 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಮತ್ತು ನಿಪಿ-12 ರಿಂದ 18 ರ ದಾಖಲೆಗಳ ಮೇಲೆ ಆರೋಪಿ, ನನ್ನ ಮತ್ತು ಚಾಸಾ-8 ರವರ ಸಹಿಗಳನ್ನು ಪಡೆಯುವ ಉದ್ದೇಶವನ್ನು ನಮಗೆ ತಿಳಿಸಿದ್ದರು ಎನ್ನುವುದು ಸರಿಯಲ್ಲ.

ನನ್ನ ಸಮಕ್ಷಮವೇ ನಿಪಿ-12 ರಿಂದ 18 ರ ದಾಖಲೆಗಳ ಮೇಲೆ ಆರೋಪಿಯ ಮಾದರಿ ಬರವಣಿಗೆ ಮತ್ತು ಸಹಿಗಳನ್ನು ಪಡೆದುಕೊಂಡು ಪೊಲೀಸರು ನಿಪಿ-11 ರ ಪಂಚನಾಮೆಯನ್ನು ನನ್ನ ಸಮಕ್ಷಮವೇ ಬರೆದು ಸದರಿ ಎಲ್ಲಾ ದಾಖಲೆಗಳ ಮೇಲೂ ನನ್ನ ಸಹಿಗಳನ್ನು ಪಡೆದುಕೊಂಡಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎಸ್.ಎ. ವಕೀಲರಿಂದಃ ಇಲ್ಲಾ**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**